**ದಿನಾಂಕಃ 09.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ಎಸ್ ಎಲ್ ವಕೀಲರಿಂದಃ**

ನಿಪಿ–2 ಆಗುವ ಸಂದರ್ಭದಲ್ಲಿ ರುದ್ರಮ್ಮ ಅವರನ್ನು ನಾನು ನೊಂದಣಿ ಕಛೇರಿಗೆ ಕರೆದುಕೊಂಡು ಬಂದಿರುವುದಿಲ್ಲ. ಅವರೇ ಸ್ವತಃ ಬಂದು ನೊಂದಣಿ ಮಾಡಿಸಿರುತ್ತಾರೆ. ಆ ದಿನ ನಾನು, ನನ್ನ ಅಕ್ಕ, ಸಾಕ್ಷಿದಾರರು ಮತ್ತು ವಕೀಲರು ನೋಂದಣಿ ಕಛೇರಿಗೆ ಬಂದಿರುತ್ತೇವೆ. ನಾನು ರುದ್ರಮ್ಮರವರ ಮಕ್ಕಳನ್ನು ಸಾಕ್ಷಿಗಾರರನ್ನಾಗಿ ಸಹಿ ಮಾಡಲು ಕೇಳಿಕೊಂಡಿರುವುದಿಲ್ಲ. ಛಾಪಾ ಕಾಗದವನ್ನು ಯಾರ ಹೆಸರಿನಲ್ಲಿ ತೆಗೆದುಕೊಂಡು ಬಂದಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ–2 ನ್ನು ಪರಶುರಾಮ ವಕೀಲರು ಬರವಣಿಗೆ ಮಾಡಿಸಿರುತ್ತಾರೆ. ನೊಂದಣಿ ಕಛೇರಿಯಲ್ಲಿ ಬರವಣಿಗೆ ಮಾಡಿಸಿರುತ್ತಾರೆ. ನಿಪಿ–2 ನ್ನು ತಯಾರಿಸಲು ರುದ್ರಮ್ಮರವರು ಮಾಹಿತಿ ನೀಡಿರುತ್ತಾರೆ. ಛಾಪಾ ಕಾಗದವನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದು ಮಾಹಿತಿ ಇರುವುದಿಲ್ಲ. ನಿಪಿ–2 ನೋಂದಣಿ ಮಾಡಿಸುವಾಗ ರುದ್ರಮ್ಮ ಆರೋಗ್ಯ ಸರಿ ಇರಲಿಲ್ಲ ಅಂದರೆ ಸುಳ್ಳು. ಆದ ಕಾರಣ ರುದ್ರಮ್ಮ ರವರ ಹಿಸ್ಸೆ ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ. ನಾನು 1/3 ಹಿಸ್ಸೆ ಮಾತ್ರ ಅರ್ಹನು ಅಂದರೆ ಸರಿಯಲ್ಲ. ರುದ್ರಮ್ಮರವರಿಗೆ ಹಕ್ಕು ಖುಲಾಸೆ ಪತ್ರ ಬರೆಯಲು ಅನಿವಾರ್ಯ ಇರಲಿಲ್ಲ ಅಂದರೆ ಸರಿಯಲ್ಲ. ಅವರಿಗೆ ನಿಪಿ–2 ರಲ್ಲಿ ಸಹಿ ಮಾಡಲು ಅರಿವು ಕೂಡ ಇರಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಮೋಸ ಮಾಡುವ

ಉದ್ದೇಶದಿಂದ ರುದ್ರಮ್ಮ ರವರ ಮೋಸದಿಂದ ಸಹಿ ಪಡೆದು ಅವರ ಹಿಸ್ಸೆ ಪಡೆದುಕೊಂಡಿರುತ್ತೀರಿ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗೂ ಸಹ ಸಮ ಅರ್ಧ ಹಿಸ್ಸೆ ಇದೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**